**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಹೊಸಪೇಟೆ**

**ಸಿ.ಸಿ.ನಂ. :379/2022**

ಫಿರ್ಯಾಧಿದಾರರುಃ - ರಾಜ್ಯದ ಪರವಾಗಿ ಸಬ್ ಇನ್ಸ್ ಪೆಕ್ಟರ್ ಆಫ್ ಪೋಲೀಸ್,
ಟಿ.ಬಿ.ಡ್ಯಾಂ ಪೊಲೀಸ್ ಠಾಣೆ, ಹೊಸಪೇಟೆ ತಾಲೂಕು,
ವಿಜಯನಗರ ಜಿಲ್ಲೆ.

ವಿರುದ್ಧ

ಆಪಾಧಿತರು ಃ- ನಾಗವರ ಪ್ರಸಾದ ಪಿ. ತಂದೆ ದಿವಂಗತ ವೆಂಕಟಸುಬ್ಬಯ್ಯ ಪಿ. ವಯಸ್ಸುಃ 48 ವರ್ಷ, ವಾಸಃ 30 ನೇ ವಾರ್ಡ, ನಿಶಾನೆ ಕ್ಯಾಂಪ್, ಟಿ.ಬಿ.ಡ್ಯಾಂ, ಹೊಸಪೇಟೆ, ವಿಜಯನಗರ ಜಿಲ್ಲೆ.

ನಾನು ತೃಪ್ತಿ ಧರಣಿ ಬಿ.ಎ. ಎಲ್.ಎಲ್.ಎಂ., ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಹೊಸಪೇಟೆ ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆಯನ್ನು ಮಾಡುತ್ತಿದ್ದೇನೆ.

**ದೋಷರೋಪಣೆ**

ದಿನಾಂಕಃ 05.04.2022 ರಂದು ಬೆಳಿಗ್ಗೆ 10-00 ಗಂಟೆಯ ಸಮಯದಲ್ಲಿ ಹೊಸಪೇಟೆಯ ಟಿ.ಬಿ.ಡ್ಯಾಂ ಪೋಲಿಸ್ ಠಾಣಾ ಸರಹದ್ದಿನಲ್ಲಿ ಬರುವ, ಹೊಸಪೇಟೆಯ ನಿಶಾನೆ ಕಾಂಪ್ ನಲ್ಲಿರುವ ಆರೋಪಿಯಾದ ನಿನ್ನ ಮನೆಯ ಹಿಂದೆ ಇರುವ ಜಾಗದ ವಿಚಾರದಲ್ಲಿ ಸಾಕ್ಷಿ-1 ನಾಗವೇಣಿ ರವರೊಂದಿಗೆ ಜಗಳ ತೆಗೆದು, ಅವಮಾನ ಮಾಡಿ ಆ ಮೂಲಕ ಅವರಿಗೆ ಉದ್ರೇಕವನ್ನುಂಟು ಮಾಡಿದರೆ ಅಂತಃ ಉದ್ರೇಕದಿಂದ ಅವರು ಶಾಂತಿ ಭಂಗವನ್ನು ಉಂಟು ಮಾಡಲೆಂಬ ಅಥವಾ ಇತರ ಯಾವುದೇ ಅಪರಾಧವನ್ನು ಮಾಡಲೆಂಬ ಉದ್ದೇಶದಿಂದ ಆರೋಪಿಯಾದ ನೀನು ಸಾಕ್ಷಿ-1 ರವರ ಶೆಡ್ ಬಳಿ ಹೋಗಿ ಸಾಕ್ಷಿ-1 ರವರಿಗೆ "ನೀನು ಹಾಕಿರುವ ಶೆಡ್ ನ ಹಿಂದಿನ ಜಾಗ ನನಗೆ ಸೇರಿದ್ದಲೇ ಸೂಳಿ" ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು, ಈ ಮೂಲಕ ಆರೋಪಿಯಾದ ನೀನು

ಭಾರತೀಯ ದಂಡ ಸಂಹಿತೆ ಕಲಂ.504 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

ಎರಡನೆಯದಾಗಿ ಈ ಮೇಲೆ ತಿಳಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಸಾಕ್ಷಿ-1 ರವರಿಗೆ ಟಾಯಿಲೆಟ್ ಮತ್ತು ಬಾತ್ ರೂಂ ನ್ನು ಉಪಯೋಗಿಸಲು ಬಿಡದೇ ಇರುವುದು ಹಾಗೂ ಸಾಕ್ಷಿ-1 ರವರು ಈ ವಿಷಯವನ್ನು ಮುಖಂಡರಿಗೆ ಹೇಳಲು ಹೋಗುತ್ತಿದ್ದಾಗ, ಆಗೋಪಿಯಾದ ನೀನು ಸಾಕ್ಷಿ-1 ರವರನ್ನು ಅಕ್ರಮವಾಗಿ ತಡೆದು ನಿಲ್ಲಿಸಿ, ಈ ಮೂಲಕ ಆರೋಪಿಯಾದ ನೀನು ಭಾರತೀಯ ದಂಡ ಸಂಹಿತೆ ಕಲಂ.341 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

ಮೂರನೆಯದಾಗಿ ಈ ಮೇಲೆ ತಿಳಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಸಾಕ್ಷಿ-1 ರವರಿಗೆ ಕೈಯಿಂದ ಕಪಾಳಕ್ಕೆ ಹೊಡೆದು ಸ್ವಯಿಚ್ಛೆಯಿಂದ ಸಾದಾ ಸ್ವರೂಪದ ಗಾಯವನ್ನುಂಟು ಮಾಡಿ, ಈ ಮೂಲಕ ಆರೋಪಿಯಾದ ನೀನು ಭಾರತೀಯ ದಂಡ ಸಂಹಿತೆ ಕಲಂ.323 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

ಕೊನೆಯದಾಗಿ ಈ ಮೇಲೆ ತಿಳಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಸಾಕ್ಷಿ-1 ರವರಿಗೆ "ನೀವು ಇನ್ನೊಮ್ಮೆ ಹೊಸಪೇಟೆಗೆ ಬಂದರೆ, ಜೀವಂತವಾಗಿ ವಾಪಸ್ಸು ಹೋಗುವುದಿಲ್ಲ" ಎಂದು ಪ್ರಾಣ ಬೆದರಿಕೆ ಹಾಕಿ, ಈ ಮೂಲಕ ಆರೋಪಿಯಾದ ನೀನು ಭಾರತೀಯ ದಂಡ ಸಂಹಿತೆ ಕಲಂ.506 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

ಪ್ರಶ್ನೆಃ 1ಃ ನಿಮಗೆ ಈಗ ಓದಿ ಹೇಳಿದ ಆಪಾದನೆಯನ್ನು ಅರ್ಥ ಮಾಡಿಕೊಂಡಿದ್ದೀರಾ?

ಉತ್ತರಃ ಆ-

ಪ್ರಶ್ನೆ 2ಃ ನೀವು ಅಪಾದನೆಯನ್ನು ಒಪ್ಪಿಕೊಳ್ಳುತ್ತೀರಾ ಅಥವಾ ಕೇಸನ್ನು ನಡೆಸುತ್ತೀರಾ?

ಉತ್ತರಃ ಆ-

(ಆಪಾದಿತರ ಹೇಳಿಕೆಯನ್ನು ನನ್ನ ಸಮ್ಮುಖದಲ್ಲಿ ಪಡೆದುಕೊಂಡಿದ್ದು ಸದರಿ ಹೇಳಿಕೆಯು ಆಪಾದಿತನ ಸಂಪೂರ್ಣ ಮತ್ತು ಸರಿಯಾದ ಹೇಳಿಕೆಯನ್ನು ಒಳಗೊಂಡಿರುತ್ತದೆ).

ದಿಃ 17.06.2023.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಹೊಸಪೇಟೆ.